2. ರಾಜ್ಯದ ಎಷ್ಟು ದೇವಸ್ಥಾನಗಳಿಗೆ ಹಣ ಮಂಜೂರು ಮಾಡುವಂತೆ ಆದೇಶ ನೀಡಿರುವರು?

3. ನೀಡಿದಲ್ಲಿ ಎಷ್ಟು ದೇವಸ್ಥಾನಗಳಿಗೆ ಹಣ ಮಂಜೂರಾತಿ ದೊರಕಿದೆ?

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು) :—

1. ಸದರಿ ದೇವಲಯಕ್ಕೆ 2000-2001ನೇ ಸಾಲಿನಲ್ಲಿ ಅನುದಾನ ಮಂಜೂರಾಗಿರುವುದಿಲ್ಲ.

2. 2000-2001ನೇ ಸಾಲಿನಲ್ಲಿ ರಾಜ್ಯದಲ್ಲಿರುವ ದೇವಾಲಯಗಳ ದುರಸ್ಥಿ/ ಜೀರ್ಣೋದ್ಧಾರಕ್ಕಾಗಿ 237 ಸಂಸ್ಥೆಗಳಿಗೆ ರೂ.126.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಹಾಗೂ ನಿರ್ಮಾಣಕ್ಕಾಗಿ 393 ಸಂಸ್ಥೆಗಳಿಗೆ ರೂ.105.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ.

3. ಸರ್ಕಾರದ ಆದೇಶ ಸಂ. ಕಂಇ 125 ಮುಆಬ 2000 ಮತ್ತು ಕಂಇ 126 ಮುಆಬ 2000 ದಿನಾಂಕ: 31.03.2001 ರಲ್ಲಿ ಕೋಲಾರ ಜಿಲ್ಲೆಯ 21 ಧಾರ್ಮಿಕ ಸಂಸ್ಥೆಗಳಿಗೆ ರೂ.9.55 ಲಕ್ಷ ಮೊತ್ತವನ್ನು ಮಂಜೂರು ಮಾಡಿದೆ.

ಎನ್.ಜಿ.ಇ.ಎಫ್ ಕಾರ್ಖಾನೆಯನ್ನು ಖಾಸಗೀಕರಣಗೊಳಿಸುವುದು

2459(2007) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರ್ಕಾರಿ ಸ್ವಾಮ್ಯದ ಎನ್‌ಜಿಇಎಫ್ ಕಾರ್ಖಾನೆಯನ್ನು ಖಾಸಗಿಯವರಿಗೆ ಮಾರಾಟ ಮಾಡಲು ಸರ್ಕಾರ ನಿರ್ಧರಿಸಿದೆಯೇ, ಹಾಗಿದ್ದಲ್ಲಿ ಕಾರಣಗಳೇನು;

ಆ) ಸದರಿ ಕಾರ್ಖಾನೆಯನ್ನು ಕೊಳ್ಳಲು ಯಾರಾದರೂ ಮುಂದೆ ಬಂದಿದ್ದಾರೆಯೆ ಬಂದಿದ್ದಲ್ಲಿ ಮಾಹಿತಿ ನೀಡುವುದು;

ಇ) ಎನ್‌ಜಿಇಎಫ್ ಕಾರ್ಖಾನೆಯಲ್ಲಿರುವ ಒಟ್ಟು ಕಾರ್ಮಿಕರ ಸಂಖ್ಯೆ ಎಷ್ಟು, ಇವರಿಗೆ ನೀಡಲಾಗಿತ್ತಿರುವ ವಾರ್ಷಿಕ ಒಟ್ಟು ವೇತನ ಎಷ್ಟು, ಕಳೆದ 3 ವರ್ಷಗಳಲ್ಲಿ ವಿ.ಆರ್.ಎಸ್. ತೆಗೆದುಕೊಂಡಿರುವ ಕಾರ್ಮಿಕರ ಸಂಖ್ಯೆ ಎಷ್ಟು, ಈಗ ಒಟ್ಟು ಕಾರ್ಮಿಕರೆಷ್ಟು ;

ಈ) ಕಳೆದ 3 ವರ್ಷಗಳ ಕಾರ್ಖಾನೆಯ ಲಾಭ-ನಷ್ಟದ ವಿವರಗಳನ್ನು ನೀಡುವುದು ;

ಉ) ಎನ್‌ಜಿಇಎಫ್ ಕಾರ್ಖಾನೆಯನ್ನು ಖಾಸಗಿಕರಣಗೊಳಿಸುವ ಅಗತ್ಯ ಇದೆಯೇ, ಕಾರ್ಖಾನೆಯನ್ನು ಸರ್ಕಾರವೇ ಅಭಿವೃದ್ಧಿಗೊಳಿಸಲು ಸಾಧ್ಯವಿಲ್ಲವೆ, ಈ ಕುರಿತು ಸರ್ಕಾರದ ನಿಲುವೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಅ) ಹೌದು, ಎನ್‌ಜಿಇಎಫ್ ಕಾರ್ಖಾನೆಯು ಹಾಲಿ ಸ್ಪರ್ಧಾತ್ಮಕ ಹಾಗೂ ಜಾಗತಿಕ ಸ್ಥಿತಿಯನ್ನು ಎದುರಿಸದೇ ಇದ್ದ ಕಾರಣದಿಂದ ಸರ್ಕಾರವು ಸದರಿ ಕಂಪನಿಯನ್ನು ಖಾಸಗಿಕರಣಗೊಳಿಸಲು ನಿರ್ಧರಿಸಿದೆ.

ಆ) ಜಾಗತಿಕ ಸಮಾಲೋಚಕರಾದ ಮೆ: ಅರ್ನೆಟ್ಸ್ ಅಂಡ್ ಯಂಗ್ ಪ್ರೈ ಲಿ. ಇವರನ್ನು ಕಂಪನಿಯ ಖಾಸಗೀಕರಣಕ್ಕಾಗಿ ಬಿಡ್ಡುಗಳನ್ನು ಆಹ್ವಾನಿಸಲು ನೇಮಿಸಿದ್ದು, ಅವರು ಈ ತಿಂಗಳ 4ನೇ ವಾರದಲ್ಲಿ ಜಾಹಿರಾತುಗಳನ್ನು ಬಿಡುಗಡೆ ಮಾಡುವರು.

ಇ) ದಿ: 1-7-2001ರವರೆಗೆ ಒಟ್ಟು ಕಾರ್ಮಿಕರ ಸಂಖ್ಯೆ 2890 ಇದೆ.

ಇವರಿಗೆ ನೀಡಲಾಗುತ್ತಿರುವ ವಾರ್ಷಿಕ ಒಟ್ಟು ವೇತನ ರೂ.36.00 ಕೋಟಿಗಳು (ಪಿಎಫ್ ವಂತಿಗೆ ಸಹಿತ) ಕಳೆದ 3 ವರ್ಷಗಳಲ್ಲಿ ಸ್ವಯಂ ನಿವೃತ್ತಿ ಹೊಂದಿರುವ ಕಾರ್ಮಿಕರ ಸಂಖ್ಯೆ 759. ಈಗಿನ ಒಟ್ಟು ಕಾರ್ಮಿಕರು 2890.

ಈ) ಕಂಪನಿಯ ಕಳೆದ 3 ವರ್ಷಗಳ ನಷ್ಟದ ವಿವರ ಕೆಳಕಂಡಂತಿದೆ.

1998-99	ರೂ.37.46 ಕೋಟಿಗಳು
1999-2000	ರೂ.18.43 ಕೋಟಿಗಳು
2000-01	ರೂ.32.00 ಕೋಟಿಗಳು (ಅಂದಾಜು)

ಉ) ಸ್ಪರ್ಧಾತ್ಮಕತೆ ಮತ್ತು ಜಾಗತೀಕರಣ ಸ್ಥಿತಿಯ ಹಿನ್ನಲೆಯಲ್ಲಿ ಸರ್ಕಾರವು ಸದರಿ ಕಂಪನಿಯನ್ನು ಖಾಸಗೀಕರಣಗೊಳಿಸಲು ನಿರ್ಧರಿಸಿದೆ. ಸರ್ಕಾರವು ಕಂಪನಿಯನ್ನು ಅಭಿವೃದ್ಧಿಗೊಳಿಸುವುದು ಸಾಧ್ಯವಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವಶಪಡಿಸಿಕೊಂಡ ಜಮೀನು

2460(2596) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.